ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡಾವಳಿಗಳು**

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ ಖಾಸಗಿ ಅನುದಾನಿತ ಕಾಲೇಜುಗಳಲ್ಲಿನ ಬೋಧಕರ ವಯೋನಿವೃತ್ತಿ ವಯಸ್ಸನ್ನು ನಿಗಧಿಪಡಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಇಡಿ:37:ಯುಎನ್ಇ:2009(ಪಿ), ದಿನಾಂಕ: 15.10.2009.
2. ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:8888/2020ಕ್ಕೆ ಸಂಬಂಧಿಸಿದ ದಿನಾಂಕ:17.02.2023 ರ ತೀರ್ಪು.

*****

**ಪ್ರಸ್ತಾವನೆ:**

ಉಲ್ಲೇಖ(1) ರ ಆದೇಶದಲ್ಲಿ ವಿಶ್ವವಿದ್ಯಾಲಯಗಳ ಬೋಧಕರುಗಳಿಗೆ ನಿವೃತ್ತಿ ವಯಸ್ಸನ್ನು 60 ರಿಂದ 62ಕ್ಕೆ ಹೆಚ್ಚಿಸಿ, ಉಳಿದ ಬೋಧಕರುಗಳ ವಯೋನಿವೃತ್ತಿ ವಯಸ್ಸನ್ನು 60 ವರ್ಷಗಳಾಗಿ ಮುಂದುವರೆಸಲಾಗಿದೆ.

ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಬೋಧಕ ಸಿಬ್ಬಂದಿಗಳ ವಯೋನಿವೃತ್ತಿ ವಯಸ್ಸನ್ನು 62ಕ್ಕೆ ಹೆಚ್ಚಿಸುವಂತೆ ಸರ್ಕಾರ/ಇಲಾಖೆಗೆ ನಿರ್ದೇಶನ ನೀಡುವಂತೆ ಕೋರಿ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದ ವಿವಿಧ ಪೀಠಗಳಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು ಅವುಗಳಲ್ಲಿ ನೀಡಿದ ಮಧ್ಯಂತರ ಆದೇಶಗಳನುಸಾರ ಸದರಿ ಅರ್ಜಿದಾರರುಗಳನ್ನು ವಯೋನಿವೃತ್ತಿ ವಯಸ್ಸು 60 ರ ನಂತರ ಸೇವೆಯಿಂದ ಬಿಡುಗಡೆಗೊಳಿಸದೇ ಸೇವೆಯಲ್ಲಿಯೇ ಮುಂದುವರೆಸುವಂತೆ ಆದೇಶಿಸಲಾಗಿತ್ತು. ಅದರಂತೆ ಅರ್ಜಿದಾರರುಗಳಾದ ಬೋಧಕರುಗಳು ಸೇವೆಯಲ್ಲಿ ಮುಂದುವರೆದಿರುತ್ತಾರೆ.

ಈ ಮಧ್ಯೆ ಕೆಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರುಗಳು ವಯೋನಿವೃತ್ತಿ ವಯಸ್ಸನ್ನು 62/65ಕ್ಕೆ ಹೆಚ್ಚಿಸುವಂತೆ ಸರ್ಕಾರ ಹಾಗೂ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವಂತೆ ಕೋರಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ:1728-173/2022 ಹಾಗೂ 3408, 3410-12/2021 ಗಳನ್ನು ದಿನಾಂಕ:19.01.2023 ರಂದು ನೀಡಿದ ತೀರ್ಪಿನನ್ವಯ ವಜಾಗೊಳಿಸಿರುತ್ತದೆ.

ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಬೋಧಕರ ವಯೋನಿವೃತ್ತಿ ವಯಸ್ಸನ್ನು ಹೆಚ್ಚಿಸುವ ಸಂಬಂಧ ದಾಖಲಿಸಲಾಗಿದ್ದ ರಿಟ್ ಅರ್ಜಿ ಸಂಖ್ಯೆ:8888/2020 ಹಾಗೂ ಇದಕ್ಕೆ ಜೋಡಿಸಿರುವ ಇತರೆ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ದಿನಾಂಕ: 17.02.2023ರಂದು ನೀಡಿರುವ ತೀರ್ಪಿನನ್ವಯ ರಿಟ್ ಅರ್ಜಿಗಳನ್ನೆಲ್ಲವನ್ನೂ ವಜಾಗೊಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ 60 ವರ್ಷಗಳ ನಂತರವೂ

ಸೇವೆಯಲ್ಲಿ ಮುಂದುವರೆದಿರುವ ಇಲಾಖಾ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕರುಗಳನ್ನು ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ಈ ಆದೇಶ.

**ಸಂಖ್ಯೆ: ಕಾಶಿಇ:72:ನ್ಯಾಪ್ರ:2022-23:ಸೇವಿ-1 ಬೆಂಗಳೂರು, ದಿನಾಂಕ:23-02-2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖಾ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕರುಗಳ ವಯೋನಿವೃತ್ತಿ ವಯಸ್ಸನ್ನು ನಿಗಧಿಪಡಿಸುವ ಕುರಿತು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:8888/2020 ಹಾಗೂ ಇತರೆ ಅರ್ಜಿಗಳನ್ನು ಜೋಡಿಸಿರುವ ಪ್ರಕರಣಗಳಲ್ಲಿ ದಿನಾಂಕ:17.02.2023ರಂದು ನೀಡಿರುವ ತೀರ್ಪಿನಲ್ಲಿ ರಿಟ್ ಅರ್ಜಿಗಳನ್ನು ವಜಾಗೊಳಿಸಿರುವ ಪ್ರಯುಕ್ತ ಈ ಕೆಳಕಂಡ ಸೂಚನೆಗಳನ್ನು ನೀಡುತ್ತಾ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಿದೆ.

1. ಸರ್ಕಾರಿ ಕಾಲೇಜುಗಳ ಬೋಧಕರುಗಳ ವಯೋನಿವೃತ್ತಿ ದಿನಾಂಕದಿಂದ ಅನ್ವಯವಾಗುವಂತೆ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.
2. ಖಾಸಗಿ ಅನುದಾನಿತ ಕಾಲೇಜಿನ ಬೋಧಕರುಗಳನ್ನು ವಯೋನಿವೃತ್ತಿ ದಿನಾಂಕದಿಂದ ಅನ್ವಯವಾಗುವಂತೆ ಸೇವೆಯಿಂದ ಬಿಡುಗಡೆಗೊಳಿಸಲು ಸಂಬಂಧಪಟ್ಟ ಆಡಳಿತ ಮಂಡಳಿಗೆ ಸೂಚಿಸಿದೆ. ಬೋಧಕರನ್ನು ಬಿಡುಗಡೆಗೊಳಿಸಿರುವ ಕುರಿತು ಇಂದೇ ಈ ಕಛೇರಿ ಹಾಗೂ ಜಂಟಿ ನಿರ್ದೇಶಕರ ಕಛೇರಿಗೆ ವರದಿ ನೀಡಲು ಸೂಚಿಸಿದೆ.
3. ಸರ್ಕಾರಿ ಕಾಲೇಜುಗಳ ಬೋಧಕರುಗಳು ವಯೋನಿವೃತ್ತಿ ವಯಸ್ಸು 60 ವರ್ಷ ಪೂರ್ಣಗೊಂಡ ನಂತರದ ದಿನಾಂಕದಿಂದ ಯಾವುದೇ ವೇತನ ಹಾಗೂ ಭತ್ಯೆಗಳಿಗೆ ಅರ್ಹರಿರುವುದಿಲ್ಲ.
4. ಅನುದಾನಿತ ಕಾಲೇಜುಗಳ ಬೋಧಕರುಗಳಿಗೆ 60 ವರ್ಷ ಪೂರ್ಣಗೊಂಡ ನಂತರದಲ್ಲಿ ವೇತನಾನುದಾನ ಸ್ಥಗಿತವಾಗುವ ಪ್ರಯುಕ್ತ ವಯೋನಿವೃತ್ತಿ ದಿನಾಂಕದ ನಂತರ ಅವರುಗಳು ಯಾವುದೇ ವೇತನಾನುದಾನಕ್ಕೆ ಅರ್ಹರಿರುವುದಿಲ್ಲ.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

23/02/2023

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

1. ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ - ಅನುದಾನಿತ ಕಾಲೇಜುಗಳ ಬೋಧಕರುಗಳನ್ನು ಬಿಡುಗಡೆಗೊಳಿಸಿರುವ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.
2. ಸಂಬಂಧಪಟ್ಟ ಆಡಳಿತ ಮಂಡಳಿಗಳು - ಅಗತ್ಯ ಕ್ರಮಕ್ಕಾಗಿ
3. ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಿಗೆ- ಬೋಧಕರುಗಳನ್ನು ಬಿಡುಗಡೆಗೊಳಿಸಿರುವ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಪ್ರತಿಯನ್ನು;

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, (ಕಾಲೇಜು ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.-ಮಾಹಿತಿಗಾಗಿ.
2. ಮ್ಯಾನೇಜರ್/ಅಧೀಕ್ಷಕರು, ಕಾನೂನು ಕೋಶ, ಆಯವ್ಯಯ ವಿಭಾಗ, ವರ್ಗಾವಣೆ ಮತ್ತು ನಿಯೋಜನೆ ವಿಭಾಗ ಕೇಂದ್ರ ಕಛೇರಿ, ಬೆಂಗಳೂರು-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ಅಧಿಕಾರಿಗಳು, ಮಾಹಿತಿ ಹಾಗೂ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸುವುದು.
4. ಕಛೇರಿ ಪ್ರತಿ.